† ಶ್ರೀ ಎಸ್. ಆರ್. ಕಂಠಿ.—ಪ್ರತಿಯೊಂದು ಕಟ್ಟಡಕ್ಕೆ ರಿಜಿಸ್ಟ್ರೇಷನ್ ಎಸ್ಟಿಮೇಟು 55,100 ರೂಪಾಯಿ ಆಗಿದೆ.

ಶ್ರೀ ಎನ್. ನಂಜೇಗೌಡ.—ಒಂದು ಕಟ್ಟಡಕ್ಕೆ 30 ಸಾವಿರ ರೂಪಾಯಿಯಂತೆ 60 ಸಾವಿರ ರೂಪಾಯಿ ಡಿಪಾಜಿಟ್ ಮಾಡಿ 14 ವರ್ಷವಾಯಿತು. ದಯವಿಟ್ಟು ಈ ವರ್ಷ ಜಾಗ್ರತೆ ಕಟ್ಟಡ ಕೆಲಸ ಕೈಕೊಳ್ಳುವ ಹಾಗೆ ಮಾಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಡಿಸ್ಟ್ರಿಕ್ಟ್ ಬೋರ್ಡಿನಿಂದ ತಾಲ್ಲೂಕ ಬೋರ್ಡಿಗೆ ಈ ಸ್ಕೂಲುಗಳು ಬಂದಿವೆ. ಸರಕಾರದವರು ಒಂದು ಸ್ಕೂಲಿಗೆ 12 ಸಾವಿರ, ಇನ್ನೊಂದು ಸ್ಕೂಲಿಗೆ 10,500 ರೂಪಾಯಿ ಗ್ರಾಂಟು ಕೊಟ್ಟಿದ್ದಾರೆ. ಇನ್ನೂ ಸ್ವಲ್ಪ ಹಣ ತಾಲ್ಲೂಕ್ ಬೋರ್ಡು ಕೊಡಬೇಕಾಗುತ್ತದೆ.

ಶ್ರೀ ಎನ್. ನಂಜೇಗೌಡ.—ಶೇಕಡ 50 ರಷ್ಟು ಸರಕಾರ ಕೊಡಬೇಕು ಎಂದು ಇದ್ದುದರಿಂದ ಸಾರ್ವಜನಿಕರಿಂದ 30 ಸಾವಿರ ರೂಪಾಯಿ ಡಿಪಾಜಿಟ್ ಮಾಡಲಾಗಿದೆ ಅಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಶೇಕಡ 50 ರಷ್ಟು ಕೊಡುವುದನ್ನು ಸರಕಾರ ಒಪ್ಪಿಲ್ಲ. ಇದು ಅನೇಕ ವರ್ಷಗಳಿಂದ ಕರೆಸ್ಪಾಂಡೆನ್ಸ್‌ನಲ್ಲಿದೆ. ಒಂದು ಸ್ಕೂಲು ಕಟ್ಟಡಕ್ಕೆ 12 ಸಾವಿರ ಇನ್ನೊಂದಕ್ಕೆ 10,500 ರೂಪಾಯಿ ಕೊಡುತ್ತೇವೆ ಎಂದು ಸ್ಪಷ್ಟಪಡಿಸಿದೆ. ಉಳಿದ ಹಣವನ್ನು ತಾಲ್ಲೂಕ್ ಬೋರ್ಡ್ ಕೊಡಬೇಕಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಜಿಲ್ಲಾ ಬೋರ್ಡು ಜನಗಳಿಗೆ ಪುನರಾಯಿಸಿ 30 ಸಾವಿರ ರೂಪಾಯಿ ಜಮಾ ಮಾಡಿ ಡಿಪಾಜಿಟ್ ಮಾಡಿದೆ.....

ಅಧ್ಯಕ್ಷರು.—"ಪುನರಾಯಿಸಿ" ಎಂದು ಹೇಳದೆ "ಪ್ರೋತ್ಸಾಹಿಸಿ" ಎಂದು ಹೇಳಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಜನರನ್ನು ಪ್ರೋತ್ಸಾಹಿಸಿ ಜನಗಳಿಂದ ಹಣ ವಸೂಲ್ಮಾಡಿ ಡಿಪಾಜಿಟ್ ಮಾಡಿದ್ದಾರೆ. ಸರಕಾರದ ನೀತಿ ಶೇಕಡ 50 ರಷ್ಟು ಕೊಡಬೇಕು ಎಂದಿದೆ. ಈ ನೀತಿ ಪ್ರಕಾರ ಹಣ ಕೊಟ್ಟು ಈ ಪಾಠಶಾಲೆ ಕಟ್ಟಡ ಕಟ್ಟಿಸುವುದಕ್ಕೆ ಸೂಕ್ತ ಏರ್ಪಾಡು ಮಾಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಆಗ್ಗೆ ಆ ನೀತಿ ಇದ್ದಿತು. ಆದರೆ ಕರೆಸ್ಪಾಂಡೆನ್ಸ್ ನಡೆದು 9-12-1958 ನೇ ದಿನ ಈ ಮೊದಲು ನಾನು ಹೇಳಿದ ಹಾಗೆ ಹಣ ಕೊಡುತ್ತೇನೆಂದು ಒಪ್ಪಿಕೊಂಡಿತು. ಈ ಸಂದರ್ಭದಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ವಜಾ ಆಗಿ ತಾಲ್ಲೂಕ್ ಬೋರ್ಡ್ ಬಂದಿದೆ. ಅವರು ಈ ಕೆಲಸ ತಗೆದುಕೊಂಡು ಕಟ್ಟಡ ಕಟ್ಟಿಸುವುದು ಒಳ್ಳೆಯದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—30 ಸಾವಿರ ರೂಪಾಯಿಗಳ ಡಿಪಾಜಿಟ್ಟು ಮೇರೆ 4 ಪರ್ಸೆಂಟ್ ಬಡ್ಡಿ ದರದಂತೆ ಕಳೆದ 14 ವರ್ಷಗಳಲ್ಲಿ 17 ಸಾವಿರ ರೂಪಾಯಿ ಬಡ್ಡಿಯಾಗುತ್ತದೆ. ಅಷ್ಟು ಹಣ ಕೊಟ್ಟು ಕಟ್ಟಡ ಕಟ್ಟಿಸುವುದಕ್ಕೆ ಪಾಗ್ವಾನ ಮಾಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಇದರಲ್ಲಿ ಸರಕಾರದ ತಪ್ಪು ಏನೂ ಇಲ್ಲ. ಡಿಸ್ಟ್ರಿಕ್ಟ್ ಬೋರ್ಡ್ ಈ ಕೆಲಸ ಮಾಡಬೇಕಾಗಿತ್ತು. ಡಿಸ್ಟ್ರಿಕ್ಟ್ ಬೋರ್ಡ್ ಹೋದ ಮೂಲಕ ತಾಲ್ಲೂಕ್ ಬೋರ್ಡಿಗೆ ಬಂದುದರಿಂದ ತಾಲ್ಲೂಕ್ ಬೋರ್ಡು ಮಾಡಬೇಕಾಗಿತ್ತು. ಇದಕ್ಕೆ ಬಡ್ಡಿ ಕೊಡುವುದಕ್ಕಾಗುವುದಿಲ್ಲ.

Tek Chand Report on Prohibition

*Q.—329. Sri GANJI VEERAPPA (Harihar).—

Will the Government be pleased to state :—

(*a*) whether Government have considered the Tek Chand report on Prohibition and taken any decision on the same ;

(*b*) whether Government are contemplating the revision of their Prohibition Policy ;

(*c*) whether Government of India have invited suggestions from the State Government regarding the Tek Chand Committee report ;

---

†Indicates that the remarks or speeches have not been revised by the member concerned

(SRI GANJI VEERAPPA)

(*d*) if so, whether the State Government has sent its views to the Government of India on the same;

(*e*) what are the views of the Government on the Tek Chand Committee Report?

A.— Sri M. V. RAMA RAO (Minister for Law).—

(*a*) The report is under consideration of Government.
(*b*) Dose not arise in view of the answer to subclause (*a*).
(*c*) Yes.
(*d*) Not yet in view of reply to question at (*a*).
(*e*) The report is still under consideration and the views can be expressed only alter full and detailed examination of the report.

Sri GANJI VEERAPPA.—May I know when the Tek Chand Committee report was received and since how long it is under the consideration of the Government?

Sri M. V. RAMA RAO.—The report of the Prohibition Study Team was submitted to the Government of India and copies have been received from the Government of India by the State Government

Sri V. S. PATIL.—May I know when this Tek Chand Committee report was published or forwarded to the Central Government and when this Government received a copy of it?

Sri M. V. RAMA RAO.—The date on which the report of the Prohibition Study Team was submitted to the Government of India is not available with us. The copies of the report were received in the State Government Secretariat in the middle of last year.

Sri GANJI VEERAPPA.—May I know whether the Government is aware that the neighbouring States of Andhra and Maharashtra have revised their prohibition policy and it has an impact on the working of prohibition in Mysore State?

Sri M. V. RAMA RAO.—Several factors tend to have an impact on the enforcement of the policy of prohibition and the variations, which the hon'ble member referred to, effected in the neighbouring States of Andhra and Maharashtra must contribute their share to make this impact.

Sri SIDDAIAH KASHIMATH.—There are so many suggestions. May I know whether any suggestions have been made to the Government of India on this report?

Sri M. V. RAMA RAO.—Suggestions have not been made. I have answered that.

Sri S. S. KOLKE BAIL.—May I know what is the particular difficulty coming to quick decision on this simple report?.

Sri M. V. RAMA RAO — There is no particular difficulty. But the hon'ble member is in this advantageous position over the Government that he has not seen the report.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪಾನಪ್ರತಿಬಂದಕದ ಬಗ್ಗೆ ತೇಕ್‌ಚಂದ್ ಸಮಿತಿಯವರು ಒಪ್ಪಿಸಿರುವ ವರದಿಯ ಬಗ್ಗೆ ತಾವು ಕೇಂದ್ರ ಸರ್ಕಾರಕ್ಕೆ ತಮ್ಮ ಸಲಹೆಯನ್ನು ಕಳುಹಿಸುವುದಕ್ಕೆ ಮುಂಚೆ ಈ ಸಭೆಯ ಹಾಗೂ ಈ ರಾಜ್ಯದ ಜನಗಳ ಅಭಿಪ್ರಾಯವನ್ನು ಕೇಳುತ್ತೀರಾ, ಸ್ವಾಮಿ ?

Sri M. V. RAMA RAO.—The views of the hon'ble members of this House have been expressed time and again and the Government is fairly accurately informed about the state of opinion in regard to this matter.

ಶ್ರೀ ಆರ್. ಎಸ್. ಪಾಟೀಲ್.—ತೇಕ್‌ಚಂದ್ ಸಮಿತಿಯನ್ನು ನೇಮಕ ಮಾಡಿದ್ದು ಈ ದೇಶದಲ್ಲಿ ಪಾನನಿರೋಧ ನೀತಿಯ ವಿಷಯದಲ್ಲಿ ಯಾವ ಪ್ರಭಾವೀ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಸಲಹೆ ಮಾಡುವುದಕ್ಕೋ, ಅಥವಾ ಪಾನನಿರೋಧ ನೀತಿಯನ್ನು ಪುನರ್ ವಿಮರ್ಶೆ ಮಾಡುವುದಕ್ಕೋ ಹೇಗೆ ಎನ್ನುವುದನ್ನು ದಯವಿಟ್ಟು ತಿಳಿಸಬೇಕು ?

Sri M. V. RAMA RAO.—The terms of reference which were announced by the Government of India when the Study Team was appointed are a matter of public record. The Hon'ble Member is right when he suggests that the main object of the appointment of the Prohibition Study Team was to help the Government of India with suggestions in regard to the better enforcement of the prohibition policy.

Sri V. S. PATIL.—Has this Government taken into consideration the good deal of experience of the enforcement of prohibition in the State and have they taken into consideration the recent policy adopted in the neighbouring State of Maharashtra so far as prohibition is concerned ? Or are they going to stick up to the dogmatism of prohibition ?

Sri M. V. RAMA RAO.—I do not see where dogma comes in much less speculation.

ಶ್ರೀ ಕೆ. ವಿ. ರೇವಣಸಿದ್ದಪ್ಪ.—ತೇಕ್‌ಚಂದ್ ಸಮಿತಿಯವರ ವರದಿಯ ಬಗ್ಗೆ ತಾವು ಇನ್ನೂ ಯಾವ ತೀರ್ಮಾನವನ್ನೂ ತೆಗೆದುಕೊಂಡಿಲ್ಲ. ಆಂಧ್ರ ಮತ್ತು ಮಹಾರಾಷ್ಟ್ರದವರು ಈ ಬಗ್ಗೆ ಈಗಾಗಲೇ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಮತ್ತು ಆ ಪ್ರದೇಶದ ಪಕ್ಕದ ಹಳ್ಳಿಗಳಿಂದ ನಮ್ಮ ರಾಜ್ಯಕ್ಕೆ ಬೇಕಾದಷ್ಟು ಸೇಂದಿ ಮತ್ತು ಸಂಪಾಯಿ ಬರುತ್ತಿದೆ. ಕೆಲವು ಕಡೆ ಜನಗಳು ಒಂದೊಂದು ಊರಿನಲ್ಲಿ ಸುಮಾರು 30 ಈಚಲುಮರಗಳಿಗೆ ಗಡಿಗೆಯನ್ನು ಕಟ್ಟಿ ಹೆಂಡವನ್ನು ತೆಗೆದು ಕೊಂಡು ಕುಡಿಯುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

Sri M. V. RAMA RAO.—The action taken according to the Hon'ble Member in the neighbouring States of Mabarashtra and Andhra have not been based upon recommendations made in the report of this Study Team Such changes in policy as may have been effected there seem to have been made independently of the report of the Study Team. The one has no manner of connection with the other. The other matter that thousands of date trees have been cut down, is a matter which does not arise out of this question.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಪಾನನಿರೋಧ ಹೆಚ್ಚು ಯಶಸ್ವಿಯಾಗಿ ಆಗುವುದಕ್ಕೆ ಈಗ ನಮಗಿರತಕ್ಕ ಕೆಲವು ಸೂಚನೆಗಳನ್ನು ಅಧಿಕಾರಯುತವಾಗಲೀ ಅಥವಾ ಅನಧಿಕಾರಯುತವಾಗಿ ಯಾಗಲೀ ಅದನ್ನು ಜಾರಿಗೆ ತರುವುದಕ್ಕೆ ಸರ್ಕಾರ ಪ್ರಯತ್ನ ಮಾಡಿದೆಯೇ ?

Sri M. V. RAMA RAO.—These are matters included among the large number of factors which are under the consideration of the Government.

Sri S. M. KRISHNA.—One of the reasons why the State Government has not been able to come to any conclusion about the recommendations of the Tek Chand Committee report is due to the prevalance of a deep division amongst the members of the Mysore Cabinet ?.

Sri M. V. RAMA RAO.—The Hon'ble Member's opinion is totally incorrect.

Sri S. M. KRISHNA.—Has it come to the notice of the Government that two of the Ministers in the State Government have made open pronouncement to the effect that if there is going to be any revision of prohibition policy, they are going to resign from the State Cabinet ?

Sri M. V. RAMA RAO.—It has not come to the notice of the Government.

Sri L. B. BIRJE.—(Marathi).

(*Sri V. S. Patil* was asked to translate the question into English)

Sri V. S. PATIL.—The Hon'ble Member asks, due to this prohibition, the illicit distillation has come into vogue and due to that several offences such as murders, dacoits, etc., have taken place and even deadly diseases or on the increase. So, whether the Government is going to consider this policy of prohibition in all its effect or not ?

Mr. SPEAKER.—The question is disallowed.

Sri GANJI VEERAPPA.—May I know whether the report was discussed at the Chief Ministers' Conference and if so, what was the consensus of opinion ?

Sri M. V. RAMA RAO.—So far as I am aware, the Conference of Chief Ministers may not have found time to consider or discuss this report.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮೀ, ತೇಕ್‌ಚಂದ್ ಕಮಿಟಿ ವರದಿಯ ಬಗ್ಗೆ ಈ ಸಭೆಯ ಹಾಗೂ ಜನತೆಯ ಅಭಿಪ್ರಾಯವನ್ನು ತಾವು ತೆಗೆದುಕೊಳ್ಳುತ್ತೀರಾ ಎಂದು ನಾನು ಕೇಳಿದ್ದಕ್ಕೆ ತಾವು ಸಮಾಧಾನಕರವಾದ ಉತ್ತರವನ್ನು ಹೇಳಲಿಲ್ಲ. ಅದಕ್ಕೋಸ್ಕರ ನಾನು ತಮ್ಮನ್ನು ಕೇಳುವುದು ಏನೆಂದರೆ, ತೇಕ್‌ಚಂದ್ ಕಮಿಟಿ ವರದಿಯನ್ನು ಈ ಸಭೆಯ ಮುಂದೆ ಇಟ್ಟು ಅದನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ರಾಜ್ಯಸರ್ಕಾರದವರು ಒಂದು ಅವಕಾಶವನ್ನು ಕಲ್ಪಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

Sri M. V. RAMA RAO.—No, Sir.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ನಮಗೆ ಬರತಕ್ಕಂಥ ಕೆಪಿನ್ಯೂ ಉತ್ಪತ್ತಿ ಕಡಿಮೆಯಾಗಿರುವುದಲ್ಲದೆ, ಈಗ ಗಿಡಗಳನ್ನು ಕಡಿಯುತ್ತಿರುವುದರಿಂದ, ಇದನ್ನೆಲ್ಲಾ ಮನಸ್ಸಿನಲ್ಲಿಟ್ಟುಕೊಂಡು ಬೇಗ ತೀರ್ಮಾನ ತೆಗೆದುಕೊಳ್ಳಲು ಪ್ರಯತ್ನ ಪಡುತ್ತೀರ ? ಬರುವ ಹಣ ಹೋಗುತ್ತಿದೆ.

Mr. SPEAKER.—Again and again the member should not put the same supplementaries. It is disallowed.

ಶ್ರೀ ಸಿದ್ದಯ್ಯ ಕಾಶೀಮಠ.—ಕುಡಿಯುವವರ ಸಂಖ್ಯೆ, ಪಾನನಿರೋಧ ಅವ್ಯವಸ್ಥೆಯಾಗಿರುವುದರಿಂದ, ಪಾನನಿರೋಧದ ನೀತಿಯಲ್ಲಿ ಏನಾದರೂ ಬದಲಾವಣೆ ಮಾಡುವಿರಾ ?

Mr. SPEAKER.—Same thing may be repeated in one form or the other.

Sri M. V. RAMA RAO.—The premises put forward by the Hon'ble Member are not correct.

Sri R. K. PRASAD.—Is not the Government committed to a policy of complete prohibition before the end of the III Plan ?

Mr. SPEAKER.—The same thing is repeated, in one form or other.

Sri S. M. KRISHNA.—Before the report of the Tekchand Committee came, the Chief Minister answered on behalf of the Government and asserted that the prohibition policy needed reconsideration. After that report, is the Chief Minister of the same opinion ?

Sri S. NIJALNIGAPPA (Chief Minister).—Yes: I am of the same opinion.

Supply of additional quantity of Water to Andhra Pradesh from Tungabhadra Reservoir.

*Q.—344. Sri ANDANIAH [on behalf of SRI K. MALLAPPA (Hebbur)].—

Will the Government be pleased to state :—

(*a*) when the decision to supply additional quantity of water to Andra Pradesh from the Tungabhadra Reservoir was taken :

(*b*) the factors that were taken into consideration while taking such a decision ;

(*c*) whether it is not a fact that the State Government has lost its rights regarding utilisation of Tungabhadra waters by taking such a decision ;

(*d*) whether they would clarify their definite policy regarding this matter ?

A.—Sri S. NIJALINGAPPA (Chief Minister).—

(*a*) In January 1964.

(*b*) (i) that the supply was subject to requirements of the ayacut as it develops under the Tungabhadra Project and the availability of surplus water in the Reservoir ;

(ii) that it was on a purely temporary basie without involving any rights by the temporary usage ;

(iii) that the arrangement would not constitute a precedent ;

(iv) that the extra revenue derived by the Government of Andhra Pradesh by growing the second crop would be apportioned between the Governments concerned.

(*c*) No.

(*d*) In view of the rapid development of the ayacut under the Tungabhadra Project, it is under examination whether there would be any water, surplus to the requirements of the project, for being given for second crop cultivation in Krishna Delta.

ಶ್ರೀ ಅಂದಾನಯ್ಯ.—ತಾವು (ಬ) ಗೆ ಉತ್ತರವಾಗಿ ಹೇಳುತ್ತೀದ್ದೀರಿ : ಕೃಷ್ಣಾ ಪ್ರದೇಶದಲ್ಲಿ ಎರಡನೇ ಬೆಳೆಗೆ ನೀರನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು. ತಾವು ಆಂಧ್ರ ಪ್ರದೇಶ ದೊಂದಿಗೆ ಅಗ್ರೀಮೆಂಟು ಮಾಡಿಕೊಂಡಿರುವುದರಿಂದ, ಕೃಷ್ಣಾ ಪ್ರದೇಶದ ಅಚ್ಚುಕಟ್ಟಿಗೆ ಯಾವರೀತಿ ನೀರು ಸಪ್ಲೈ ಮಾಡುತ್ತೀರಿ ?

ಶ್ರೀ ಎಸ್. ನಿಜಲಿಂಗಪ್ಪ.—ಮೊದಲು ಏನು ಮಾಡುತ್ತಿದ್ದೆವೋ ಈಗಲೂ ಅದೇ ಮಾಡುತ್ತೇವೆ. ತುಂಗಭದ್ರಾ ಪ್ರದೇಶಕ್ಕೆ ನೀರು ಕೊಟ್ಟು ಹಾಸ್ತಿ ಇದ್ದರೆ ಕೃಷ್ಣಾ ಪ್ರದೇಶಕ್ಕೆ ನೀರು ಕೊಡುತ್ತೇವೆ.

ಶ್ರೀ ಕೆ ಎಸ್. ನೂರ್ಯನಾರಾಯಣ ರಾವ್.—ನಮ್ಮ ದೇಶಕ್ಕೆ ಅವಶ್ಯಕವಾದಷ್ಟನ್ನು ಇಟ್ಟು ಕೊಂಡು ಉಳಿದಿದನ್ನು ಕೊಡುತ್ತೇವೆಂದು ತಾವು ಈಗ ಹೇಳಿದಿರಿ. ಈ ತುಂಗಾಭದ್ರಾ ಏರಿಯಾದಲ್ಲಿ ಮೈಸೂರು ಸ್ಟೇಟಿನಲ್ಲಿ ನೀರು ಕೊಡದೇನೆ ಲೋಕಲೈಸೇಶನ್ ಸ್ಕೀಮಿಗೆ ತೊಂದರೆಯಾಗಿಲ್ಲವೆ ? ಈ ನೀರನ್ನು ಇಲ್ಲಿ ಉಪಯೋಗಿಸಿಕೊಳ್ಳುವುದಕ್ಕೆ ಆಗುತ್ತಿರಲಿಲ್ಲವೆ ?